# ಘನತೆಯ ಬದುಕಿನ ಬೆಳ್ಳಿಗೆರೆ



**ದೇವದಾಸಿ ಸಮುದಾಯಕ್ಕೆ ಸೇರಿದ ತರುಣ ತರುಣಿಯರು ಹೊಸ ಬದುಕಿಗಾಗಿ ಹಂಬಲಿಸುತ್ತಿದ್ದಾರೆ. ಬದಲಾದ ಕಾಲದೊಂದಿಗೆ ಹೊಸ ಬದುಕನ್ನು ಕಟ್ಟಿಕೊಳ್ಳುವ ಅವರ ಪ್ರಯತ್ನಗಳಿಗೆ ಸಮಾಜವೂ ಸ್ಪಂದಿಸಬೇಕಾಗಿದೆ.**

**ಟಿ.ವಿ. ರೇಣುಕಮ್ಮ**
ಸಾಮಾಜಿಕ ಕಾರ್ಯಕರ್ತರು

## ಅರ್ಧ ಶತಮಾನದ ಕನ್ನುಡಿ

### ಕನ್ನಡ, ಕರ್ನಾಟಕ ಸಾಧಿಸಿದ್ದೇನು?

ಸಮಾಜ ಸೇವೆ ಎಂಬುದು ಯಾವಾಗಲೂ ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳುವ ಕೆಲಸವಲ್ಲ. ಯಾರಾದರೂ ಸಮಸ್ಯೆಯಲ್ಲಿದ್ದಾರೆ ಎಂಬ ಅರಿವಾದಾಗ ಅದಕ್ಕೆ ಮಾನವೀಯವಾಗಿ ಪ್ರತಿಕ್ರಿಯಿಸುತ್ತ, ನಾವು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಆರಂಭಿಸುತ್ತೇವೆ. ನಾನು ದೇವದಾಸಿಯರ ಜೀವನಶೈಲಿಯನ್ನು ಅರಿತುಕೊಂಡಾಗ, ತುಂಬ ಬೇಸರವೆನಿಸಿತು. ಅವರು ವಾಸಿಸುವ ಕೇರಿಗಳಿಗೆ ಹೋಗಲು ಜನರು ಅಳುಕುತ್ತಿದ್ದರು. ಇದನ್ನೆಲ್ಲ ಗಮನಿಸಿ, ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಆರಂಭಿಸಿದೆ. ಸುಮಾರು ಎರಡು ದಶಕಗಳಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ.



1993–94ರಲ್ಲಿ ಕರ್ನಾಟಕದಲ್ಲಿ ದೇವದಾಸಿ ಆಚರಣೆಯನ್ನು ನಿಷೇಧಿಸುವ ಕಾಯ್ದೆ ಜಾರಿಗೆ ಬಂದಾಗ, ಜನರಲ್ಲಿ ಅಕ್ಷರ ಜ್ಞಾನ ಕಡಿಮೆಯಿತ್ತು. ನಿಷೇಧ ಕಾಯ್ದೆಯನ್ನು ಜನರಿಗೆ, ಅದರಲ್ಲಿಯೂ ಸಂತ್ರಸ್ತರಿಗೆ, ಅವರದೇ ಭಾಷೆಯಲ್ಲಿ ಅರ್ಥ ಮಾಡಿಸುವುದು ಮುಖ್ಯವಾಗಿತ್ತು. ಕಾಯ್ದೆಯು ಜಾರಿಯಾದಾಗ, ‘ದೇವದಾಸಿ ಮಹಿಳೆಯರ ಜೊತೆಗೆ ಯಾರು ಇರುತ್ತಾರೋ, ಅವರೊಡನೆ ಸರ್ಕಾರದವರು ಮದುವೆ ಮಾಡಿಸಿಬಿಡುತ್ತಾರಂತೆ’ ಎಂಬ ಗುಲ್ಲು ಹಬ್ಬಿತು. ಇದರಿಂದಾಗಿ ಸಂತ್ರಸ್ತ ಮಹಿಳೆಯರು ಜೀವನ ನಿರ್ವಹಿಸುವುದು ಮತ್ತಷ್ಟು ಕಷ್ಟವಾಗಿ ಬಿಟ್ಟಿತು. ಕೆಲವು ಊರುಗಳಲ್ಲಿ ದೇವದಾಸಿಯಾಗಲಿರುವ ಹುಡುಗಿಗೆ ಸೋದರ ಮಾವನ ಜೊತೆಗೆ ಶಾಸ್ತ್ರಕ್ಕೆಂಬಂತೆ ಒಂದು ತಾಳಿ ಕಟ್ಟಿಸಿ, ಮದುವೆ ಮಾಡಿಬಿಡುತ್ತಿದ್ದರು. ಮುಂದಕ್ಕೆ ಅವರು ದೇವದಾಸಿ ಆಚರಣೆಯನ್ನು ಮಾಡುತ್ತ ತಮ್ಮ ಬಾಳನ್ನು ತಾವೇ ನೋಡಿಕೊಳ್ಳಬೇಕಾಗಿತ್ತು.

ಹೀಗೆ ಸರ್ಕಾರವು ಶೋಷಣೆಯನ್ನು ನಿಲ್ಲಿಸುವ ಸಲುವಾಗಿ ಅಥವಾ ಒಂದು ಒಳ್ಳೆಯ ಉದ್ದೇಶಕ್ಕಾಗಿ ಕಾಯ್ದೆಯನ್ನು ರೂಪಿಸುವವರೆಗೆ ಹೋರಾಡುವುದು ಒಂದು ಹಂತವಾದರೆ, ಅದು ಸರಿಯಾದ ರೀತಿಯಲ್ಲಿ ಜನರನ್ನು ತಲುಪುವಂತೆ ಮಾಡುವುದು ಮತ್ತೊಂದು ಹಂತ. ಕೆಲವೊಮ್ಮೆ ಕಾಯ್ದೆಯಿಂದ ಪಾರಾಗಲು ಸಂತ್ರಸ್ತರೇ ಪ್ರಯತ್ನಿಸುವ ಪ್ರಸಂಗಗಳೂ ಎದುರಾಗುತ್ತವೆ. ಆಗ ನಾವು ಅವರ ಬಗ್ಗೆ ಬೇಸರಪಟ್ಟುಕೊಂಡು ಆ ಕ್ಷೇತ್ರದ ಕೆಲಸಗಳಿಂದ ವಿಮುಖರಾಗುವಂತಿಲ್ಲ. ಕಾಯ್ದೆಯನ್ನು ಯಾಕೆ ರೂಪಿಸಲಾಗಿದೆ, ಅದರಿಂದ ಸಮುದಾಯಕ್ಕೆ ಆಗುವ ಪ್ರಯೋಜನವೇನು ಎಂಬುದನ್ನು ಪ್ರೀತಿಯಿಂದ ತಿಳಿಹೇಳುವ ಅವಶ್ಯಕತೆ ಇರುತ್ತದೆ. ನಾನು ಕೆಲಸ ಮಾಡುವ ‘ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಸ್ಥೆ’ಯು, ಅತ್ತ ಹೋರಾಟವನ್ನೂ, ಇತ್ತ ಅರಿವು ಮೂಡಿಸುವ ಕೆಲಸವನ್ನೂ ಮಾಡುತ್ತಾ ಬಂದಿದೆ. ಇಂತಹ ಜವಾಬ್ದಾರಿಗಳು ಸಮಾಜ ಸೇವೆ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಎಲ್ಲರ ಮೇಲೆ ಇರುತ್ತದೆ.

ದೇವದಾಸಿ ಪದ್ಧತಿ ನಿರ್ಮೂಲನಾ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರು ಇನ್ನಷ್ಟು ಸೂಕ್ಷ್ಮತರವಾದ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡಲು ತೊಡಗಿಸಿಕೊಂಡವರ ಪೈಕಿ ಮೊದಲ ಸಾಲಿನಲ್ಲಿ ನಾನು ಮತ್ತು ನನ್ನಂತಹ ಅನೇಕರು ಇದ್ದೆವು. ಆಗೆಲ್ಲ ನಮಗೆ ಯಾವ ರೀತಿಯ ಪರಿಸ್ಥಿತಿಗಳು ಎದುರಾಗಬಹುದು, ಅವುಗಳನ್ನು ಹೇಗೆ ಬಗೆಹರಿಸಬಹುದು ಎಂಬ ಸಿದ್ಧಮಾದರಿಯೊಂದು ಇರಲೇ ಇಲ್ಲ. ಹಾಗಾಗಿ, ಸಮಸ್ಯೆಯನ್ನು ಬಂದ ಹಾಗೆ ಎದುರಿಸುತ್ತಾ, ದೇವದಾಸಿ ಮಹಿಳೆಯರ ಏಳ್ಗೆಯನ್ನಷ್ಟೇ ಬಯಸುತ್ತ ಕೆಲಸ ಮಾಡುತ್ತಿದ್ದೆವು. ಇಂದು ಕರ್ನಾಟಕದಲ್ಲಿ ದೇವದಾಸಿ ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತ ಬಂದಿದೆ. ಹಿರಿಯ ತಲೆಮಾರಿನವರು ಆಗಿ ಹೋಗಿ, ಈಗ ಕೊನೆಯ ತಲೆಮಾರಿನಲ್ಲಿ ಕೆಲವರಷ್ಟೇ ಇದ್ದಾರೆ. ಹೊಸ ತಲೆಮಾರಿನವರು, ಈ ಪದ್ಧತಿಯನ್ನು ವಿರೋಧಿಸುತ್ತ, ತಾವು ದುಡಿಮೆ ಮಾಡಿ ಬಾಳು ಕಟ್ಟಿಕೊಳ್ಳುವುದಾಗಿ ಧೈರ್ಯವಾಗಿ ಹೇಳುತ್ತಿದ್ದಾರೆ. ಅವರಿಗೆ ಪೂರಕವಾದ ಶಿಕ್ಷಣವನ್ನು ಸರ್ಕಾರ ನೀಡುತ್ತಿದೆ. ನೆರವು ಕೂಡ ದೊರೆಯುತ್ತಿದೆ. ಈ ಬದಲಾವಣೆಗೆ ಕಾರಣ ಯುವಜನರೇ ಆಗಿದ್ದಾರೆ. ದೇವದಾಸಿಯರು ವಾಸಿಸುವ ಕೇರಿಗಳಿಗೆ ರಾತ್ರಿ ವೇಳೆ ಆಟೊದವರೂ ಬರಲು ಹಿಂದೇಟು ಹಾಕುತ್ತಾರೆ. ಅಂತಹ ಮುಜುಗರದ ಜೀವನ ನಮಗೆ ಬೇಡ ಎಂದು ಯುವಕ ಯುವತಿಯರು ನಿರ್ಧರಿಸಿ, ಈ ಪದ್ಧತಿಯನ್ನು ನಿರಾಕರಿಸಿ, ಉದ್ಯೋಗ ಅರಸುತ್ತಿದ್ದಾರೆ. ಘನತೆಯ ಜೀವನ ನಮ್ಮದಾಗಬೇಕು ಎಂದು ಅವರು ನಿರ್ಧರಿಸಿದ್ದಾರೆ. ಹಾಗೆ ನೋಡಿದರೆ ಇತ್ತೀಚೆಗಿನ ಒಂದು ದಶಕದಲ್ಲಿ ಪರಿಸ್ಥಿತಿ ತುಂಬಾನೇ ಸುಧಾರಣೆ ಕಾಣುತ್ತಿದೆ. ■